ಗ್ಯಾಲನ್ ನೀರು ಬಂದಿದೆ. ೧೦೦ ಗ್ಯಾಲನ್ ನೀರು ಬಂದಿದ್ದನ್ನು ವಿಫಲ ಎಂದು ಪರಿಗಣಿಸಿ ಮಿಕ್ಕಿದ್ದಕ್ಕೆ ಪಂಪ್ ಹಾಕಿದ್ದೇವೆ. ಮಾನ್ಯ ಸದಸ್ಯರು ಇನ್ನೂ ಬೇಕೆಂದು ಹೇಳುತ್ತಿದ್ದಾರೆ. ಅಲ್ಲಿಯ ಪರಿಸ್ಥಿತಿ ನೋಡಿ ಇನ್ನೂ ಎರಡು ಪಂಪ್ ಹಾಕಲಿಕ್ಕೆ ವ್ಯವಸ್ಥೆ ಮಾಡುತ್ತೇನೆ. ಸನ್ಮಾನ್ಯ ಸದಸ್ಯರು ಈ ಉತ್ತರದಿಂದ ಸಮಾಧಾನವಾಗುತ್ತಾರೆಂದು ಭಾವಿಸಿದ್ದೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ದಿನಾಂಕ ೮-೫-೮೫ ರಲ್ಲಿ ಕಂದಾಯ ಸಚಿವರು ೫೫ ಬಾವಿಗಳನ್ನು ತೆಗೆಸಬೇಕೆಂದು ಆರ್ಡರ್ ಮಾಡಿದ್ದರೂ, ಸಹ ರೆವಿನ್ಯೂ ಕಮಿಷನರ್‌ರವರು ಹಣವನ್ನು ಬಿಡುಗಡೆ ಮಾಡಿಲ್ಲ. ರೆವಿನ್ಯೂ ಕಮಿಷನರ್, ಚೀಫ್ ಇಂಜಿನಿಯರ್ ಇರಿಗೇಷನ್, ಇವರು ಕಳೆದ ಮೂರು ತಿಂಗಳಿಂದಲೂ ಹಣ ಬಿಡುಗಡೆ ಮಾಡಿಲ್ಲ. ಹಣ ಯಾವಾಗ ಬಿಡುಗಡೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸದಸ್ಯರು ಹೇಳಿದಂಥ ಮಾಹಿತಿ ನನ್ನಲ್ಲಿ ಇಲ್ಲ. ಅವರಿಗೆ ಕೊಳವೆ ಬಾವಿ ಬೇಕಾಗಿರುವುದು. ನಾನು ವರದಿ ತರಿಸಿನೋಡಿ, ಆದ್ಮತೆ ಮೇರೆಗೆ ಅವಕಾಶ ಇದ್ದರೆ ಕೊಳವೆ ಬಾವಿಗಳನ್ನು ತೆಗೆಸಲಿಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಶಿವಾನಂದ. ಎಚ್ ಕೌಜಲಗಿ.—ಡೆಪ್ಯುಟಿ ಕಮಿಷನರ್ ಲೆ ಕೊಳವೆ ಬಾವಿಗಳ ಮಂಜೂರು ಸಲುವಾಗಿ ಕೇಳುತ್ತಿದ್ದಾರೆ, ಆದರೂ ಸಹ ಸರ್ಕಾರದಿಂದ ಮಂಜೂರಾತಿ ದೊರೆಯುತ್ತಿಲ್ಲ. ತಮ್ಮ ಮುಖಾಂತರ ಅದನ್ನು ಬೇಗ ಪೂರೈಸಬೇಕೆಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಶ್ರೀ ಎ, ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ.

ಹಾನಗಲ್ಲಿನಲ್ಲಿ ಹುಡ್ಕೋ ಯೋಜನೆಯಿಂದ ಗೃಹ ನಿರ್ಮಾಣ.

೯೬೨. ಶ್ರೀ ಸಿ. ಎಂ. ಉದಾಸಿ (ಹಾನಗಲ್). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಸತಿ ಹಾಗೂ ಸಾರಿಗೆ ರಾಜ್ಯ ಮಂತ್ರಿಯವರು ಉತ್ತರಿಸುವರೇ ?

ಅ) ಹಾನಗಲ್ಲಿಗೆ ಹುಡ್ಕೋ ಯೋಜನೆಯ ಜಮೀನನ್ನೇನಾದರೂ ಗೃಹ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಇ) ಯಾವಾಗ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕಾರ್ಯ ಪ್ರಾರಂಭಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ವಸತಿ ಹಾಗೂ ಸಾರಿಗೆಯ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಹೊಸ ಯೋಜನೆಗಳನ್ನು ತೆಗೆದುಕೊಳ್ಳಲು ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಅನುಮೋದಿಸಿರುವ ಆದ್ಯತಾಪಟ್ಟಿಯಲ್ಲಿ ಹಾನಗಲ್ ನಗರ ಸೇರಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಸಿ. ಎಂ. ಉದಾಸಿ.—ಆದ್ಯತಾ ಪಟ್ಟಿಯಲ್ಲಿ ಹಾನಗಲ್ ಸೇರಿಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಹಿಂದೆ ಇದೇ ಖಾತೆ ವಹಿಸಿಕೊಂಡಿದ್ದ ಸಚಿವರು ಒಂದು ಆಜ್ಞೆ ಮಾಡಿದ್ದರು, ಹಿಂದಿನ ಸಾರಿ ಸ್ಥಳ ಪರಿಶೀಲನೆಗಾಗಿ ಬಂದು ಹೋದರು. ಈಗಲೂ ಸ್ಥಳ ವಶಪಡಿಸಿಕೊಳ್ಳುವ ಸಲುವಾಗಿ ಆಕ್ಷಿಸಿಷನ್ ವಿಚಾರ ನಡೆಯುತ್ತಿದೆ. ಈಗ ಮನೆಗಳ ಅವಶ್ಯಕತೆ ಬಹಳ ಇರುವುದರಿಂದ ಅಲ್ಲಿ ಜಮೀನನ್ನು ತೆಗೆದುಕೊಂಡು ಆದಷ್ಟು ಬೇಗ ಮನೆಗಳನ್ನು ಕಟ್ಟಿಸಲಿಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಪಿ. ಜಿ ಆರ್. ಸಿಂಧ್ಯ.—ಆದ್ಯತಾ ಪಟ್ಟಿಯಲ್ಲಿ ಇಲ್ಲಿ ಅಂದ ತಕ್ಷಣ ಈ ವರ್ಷ ಪ್ರಾರಂಭ ಮಾಡ ಬಾರದು ಎಂದು ಅಲ್ಲ. ಈ ವರ್ಷ ಮಾಡಲಿಕ್ಕೆ ತಯಾರಿದ್ದೇವೆ. ಆದರೆ ಅಲ್ಲಿ ಜಮೀನಿನ ಬೆಲೆ ಸಿಕ್ಕಾಪಟ್ಟೆ ಹೇಳುತ್ತಿದ್ದಾರೆ. ಹಾನಗಲ್ ಮುನಿಸಿಪಲ್ ಅಧ್ಯಕ್ಷರು ಮಾರ್ಚಿ ತಿಂಗಳಿನಲ್ಲಿ ಕಾಗದ ಬರೆದು ನಾಲ್ಕು ಎಕರೆ ಜಾಗ ಇದೆ, ಎಕರೆಗೆ ಒಂದು ಲಕ್ಷ ನಲವತ್ತು ಸಾವಿರ ರೂಪಾಯಿಯಂತೆಯೂ ಕೊಡುತ್ತಿಲ್ಲ

ಎಂದು ಹೇಳಿದ್ದಾರೆ ಎಕರೆಗೆ ಒಂದು ಲಕ್ಷ ನಲವತ್ತು ಸಾವಿರ ರೂಪಾಯಿ ಕೊಟ್ಟು ಜಮೀನನ್ನು ತೆಗೆದುಕೊಂಡು ಮನೆ ಕಟ್ಟಲಿಕ್ಕೆ ಆಗುವುದಿಲ್ಲ. ಮತ್ತೆ ಬೇರೆ ಕಡೆ ಜಮೀನು ತೆಗೆದುಕೊಂಡು ಕಟ್ಟಬೇಕೆಂದು ಪರಿಶೀಲನೆಯಲ್ಲಿದೆ, ಮಾನ್ಯ ಸದಸ್ಯರ ಕ್ಷೇತ್ರ ಅದು ಆಗಿರುವುದರಿಂದ, ಆದಷ್ಟು ಬೇಗ ಜಮೀನು ಕೊಡಿಸಿದರೆ ಆಗ ಮನೆಗಳನ್ನು ಕಟ್ಟಿಸಿಕೊಡತಕ್ಕ ಜವಾಬ್ದಾರಿ ಬರುತ್ತದೆ.

ಶ್ರೀ ಸಿ. ಎಂ. ಉದಾಸಿ.—ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಮುಖ್ಯ ಅಲ್ಲ. ಶಿರಸಿ ಹತ್ತಿರ ಆದ ಹಾಗೆ ಆಗಬಾರದು. ಒಂದು ಕಿಲೋಮೀಟರ್ ದೂರದಲ್ಲಿ ಜಾಗ ಪುಕ್ಕಟ್ಟೆ ಸಿಕ್ಕುತ್ತದೆ ಕಡಿಮೆ ಬೆಲೆಗೆ ಸಿಕ್ಕುತ್ತದೆಂದು ಕಟ್ಟಿದರೆ ಅಲ್ಲಿಗೆ ಯಾರೂ ಹೋಗಲಿಕ್ಕೆ ಇಷ್ಟಪಡುವುದಿಲ್ಲ. ಆದೇ ರೀತಿ ಶಿರಾ ಹತ್ತಿರ ಆಗಿ ೨೦ ವರ್ಷಗಳ ಕಾಲ ಆ ಮನೆಗಳಿಗೆ ಯಾರೂ ಹೋಗಲಿಲ್ಲ. ಆದ್ದರಿಂದ, ಸ್ಥಳವನ್ನು ನಿಗದಿ ಮಾಡಬೇಕಾದಾಗ, ಪುರಸಭೆಯು ಜಾಗದಲ್ಲಿ ಗುರುತಿಸುವುದು ಒಳ್ಳೆಯದು. ಇದರ ಬಗ್ಗೆ ಸಚಿವರು ಚಿಂತನೆ ಮಾಡಬೇಕಾಗುತ್ತದೆ. ಒಂದು ಕಿಲೋಮೀಟರ್ ದೂರದಲ್ಲಿ ಕಟ್ಟಿದರೆ ಶಿರಾ ಹತ್ತಿರ ಆದ ಪರಿಸ್ಥಿತಿ ಆಗುತ್ತದೆ, ಆ ಪರಿಸ್ಥಿತಿ ಆಗಬಾರದು ಎಂದು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ, ಸ್ಥಳದ ಬಗ್ಗೆ ಇಷ್ಟೊಂದು ಚರ್ಚೆ ಆಗತಕ್ಕ ಎಂದು ತಿಳಿದುಕೊಂಡಿದ್ದೇನೆ. ಡಿಮ್ಯಾಂಡ್ ಸರ್ವೆ ಮಾಡಿಸುತ್ತೇನೆ. ಹೆಚ್ಚಿನ ದರಕ್ಕೆ ತೆಗೆದುಕೊಳ್ಳತಕ್ಕ ಜನ ಇದ್ದರೆ ಮನೆಕಟ್ಟಿಸಿಕೊಡೋಣ. ಜಮೀನನ್ನು ಕೊಡಿಸುವುದರಲ್ಲಿ ಮಾನ್ಯ ಸದಸ್ಯರು ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಭಾರತ ಸರ್ಕಾರದವರು ಹುಡ್ಕೋ ಯೋಜನೆ ಮುಖಾಂತರ ಮನೆ ಕಟ್ಟಿಸುವುದಕ್ಕಾಗಿ ಹೇರಳವಾದ ಹಣವನ್ನು ಕೊಡುತ್ತಿದ್ದಾರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿರುವಂಥ ಸ್ಥಳದಲ್ಲಿ ಡಿಮ್ಯಾಂಡ್ ಇದ್ದರೆ ಕೂಡಲೇ ಮನೆ ಕಟ್ಟಿಸಿಕೊಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಕೇಂದ್ರ ಸರ್ಕಾರ ಹುಡ್ಕೋ ಯೋಜನೆ ಮೂಲಕ ಕೊಡುವಂಥ ಹಣವನ್ನು ಆದಷ್ಟು ಹೆಚ್ಚಿಗೆ ಉಪಯೋಗಿಸಿಕೊಳ್ಳಬೇಕೆಂಬುದೇ ಸರ್ಕಾರದ ಉದ್ದೇಶ. ಮನೆಗಳನ್ನು ತೆಗೆದುಕೊಳ್ಳುವಂಥ ಜನ ಇದ್ದರೆ ಎಷ್ಟು ಬೇಕಾದರೂ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಸಾಧ್ಯವಿದೆ, ತೊಂದರೆ ಏನೂ ಇಲ್ಲ.

ಕಡೂರು ನಗರಕ್ಕೆ ಶುದ್ಧವಾದ ಕುಡಿಯುವ ನೀರಿನ ಸರಬರಾಜು ಮಾಡುವ ಬಗ್ಗೆ

(೯೦೧) ಶ್ರೀ ಪಿ.ಬಿ. ಓಂಕಾರ ಮೂರ್ತಿ (ಕಡೂರು).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕಡೂರು ನಗರದಲ್ಲಿ ನೀರು ಸರಬರಾಜಿನ ಅವ್ಯವಸ್ಥೆಯಿಂದ ನಾಗರೀಕರು ಬಹಳ ವರ್ಷಗಳಿಂದ ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಮಳೆಗಾಲದಲ್ಲಿ ಕೆಂಪಿಯುವ ನೀರನ್ನು ಅಶುದ್ಧವಾಗಿ ನಾಗರೀಕರಿಗೆ ಸರಬರಾಜು ಮಾಡುವುದರಿಂದ ಅವರು ಅನಾರೋಗ್ಯಕ್ಕೆ ತುತ್ತಾಗುವುದಿಲ್ಲವೆ ;

ಇ) ಹಾಗಿದ್ದಲ್ಲಿ ಶುದ್ಧವಾದ ನೀರನ್ನು ಸರಬರಾಜು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ;

ಈ) ಯಾವಾಗ ಕಡೂರು ನಾಗರೀಕರಿಗೆ ಶುದ್ಧವಾದ ಕುಡಿಯುವ ನೀರಿನ ಸರಬರಾಜು ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಬಂದಿತ್ತು.

ಆ) ಹೌದು.